# ಇಬ್ಬರು ಸ್ನೇಹಿತರು ಮತ್ತು ಕರಡಿ

**ಇಬ್ಬರು** ಸ್ನೇಹಿತರು ತಿರುಗಾಡಲು ಹೋಗಿದ್ದರು. ಅದೇ ಸಮಯಕ್ಕೆ ಅವರಿಗೆ ಒಂದು ಕರಡಿ ಕಾಣಿಸಿತು. ಅವರಿಬ್ಬರಲ್ಲಿ ಒಬ್ಬ ಮಿತ್ರನು ಕರಡಿಯನ್ನು ನೋಡಿದ ತಕ್ಷಣ ಅತ್ಯಂತ ಭಯಗ್ರಸ್ಥನಾಗಿ, ಇನ್ನೊಬ್ಬ ಮಿತ್ರನ ಬಗ್ಗೆ ಚಿಂತಿಸದೆ, ಓಡಿಹೋಗಿ ಮರವನ್ನೇರಿದನು. ಇನ್ನೊಬ್ಬ ಮಿತ್ರನು ತಾನೊಬ್ಬನೇ ಕರಡಿಯೊಂದಿಗೆ ಹೋರಾಡುವುದು ಅಸಾಧ್ಯವಾಗಿತ್ತು. ಬೇರೆ ಉಪಾಯವಿಲ್ಲದೆ, ಸತ್ತ ಹೆಣದಂತೆ ನೆಲದ ಮೇಲೆ ಬಿದ್ದನು. ಇವನು ಮೊದಲು ಕೇಳಿದ್ದನು,'ಕರಡಿಯು ಸತ್ತ ಮನುಷ್ಯನನ್ನು ಯಾವುದೇ ರೀತಿಯ ಹಾನಿ ಮಾಡುವುದಿಲ್ಲವೆ'ಂದು.

ಕರಡಿಯು ಹತ್ತಿರ ಬಂದು ಇವನ ಮೂಗು, ಕಿವಿ, ಮುಖ, ಕಣ್ಣು ಮತ್ತು ಉಸಿರಾಟದ ಪರೀಕ್ಷೆಯನ್ನು ಮಾಡಿತು. ಇವನು ಸತ್ತು ಹೋಗಿದ್ದಾನೆಂದು ತಿಳಿದು ಕರಡಿಯು ಹೊರಟುಹೋಯಿತು. ಕರಡಿಯು ಹೊರಟುಹೋದಮೇಲೆ ಮರವನ್ನೇರಿದ ಮಿತ್ರನು ಮರದಿಂದ ಕೆಳಕ್ಕಿಳಿದನು.

ಕೆಳಗಡೆ ಇದ್ದ ಮಿತ್ರನ ಹತ್ತಿರ ಹೋಗಿ ಕೇಳಿದನು—'ಮಿತ್ರನೆ, ಕರಡಿಯು ನಿನಗೆ ಏನು ಹೇಳಿತು? ಆ ಕರಡಿ ಬಹಳ ಹೊತ್ತು ನಿನ್ನ ಕಿವಿಯಲ್ಲಿ ಮುಖ ಇಟ್ಟಿದ್ದನ್ನು ನಾನು ನೋಡುತ್ತಾ ಇದ್ದೆನು.' ಆಗ ಇನ್ನೊಬ್ಬ ಮಿತ್ರನು ಹೇಳುತ್ತಾನೆ—'ಕರಡಿಯು ನನಗೆ ಈ ರೀತಿಯಾಗಿ ಹೇಳಿತು:"ನೋಡು, ಯಾವ ಮಿತ್ರನು ಸಂಕಟದ ಸಮಯದಲ್ಲಿ ತನ್ನ ಮಿತ್ರನನ್ನು ಬಿಟ್ಟು ಓಡಿಹೋಗುತ್ತಾನೊ, ಅಂತಹವನೊಂದಿಗೆ ಎಂದಿಗೂ ಮಾತನಾಡಬಾರದು ಮತ್ತು ಸ್ನೇಹ ಮಾಡಬಾರದು" ಎಂದು.'

